ಯಂಗ್ ದಿಟ ಆಯ್ತು. ಮನೆ ದೇವ್ರು ಪೆಂಚಾಲಮ್ಮ ನಮ್ಮ ಮನೆತನದ ಮೇಲೆ ಅದೃಷ್ಟದ ಕಣ್ಣು ಬಿಟ್ಟವ್ಳೆ. ನಮ್ಮ ಪೆಂಚಾಲ ಗೌಡ್ರು, ಲಿಂಗಾಯಿತ್ರುಡುಗುರ್ನೂ ಹಿಂದಿಕ್ಕಿ ಹೋಗ್ತಾ ಅವ್ನೆ ಅಂದ್ರೆ ನೀನೇ ಯೋಚ್ನೆ ಮಾಡು. ಅವನ ಬೆನ್ನಿಗೆ ದೈವ ಬಲ ಇದೆ ಅನ್ನೋದು ಗ್ಯಾರಂಟಿ ಆಗೈತೆ. ಇರೋ ಎರಡೆಕ್ರೆ ದಿನ್ನೆ ಜಮೀನ್ನಲ್ಲಿ ಒಂದೆಕ್ರೆ ಬೇಕಾದ್ರೆ ಪಕ್ಕದ ನಾಗರೆಡ್ಡಿಗೆ ಮಾರ್ಬಿಡು. ಆದ್ರೆ ಪೆಂಚಾಲನ ಓದಿಗೆ ಮಾತ್ರ ಕಡ್ಡಿ ಆಡಿಸ್ಬೇಡ.'' ಎಂದು ಹೇಳಿದಾಗ ಓಬುಳ್ನಾಯ್ಕನು, ''ನಮ್ಮ ಪೆಂಚಾಲ ಎಷ್ಟು ಓದಿದ್ರೂ ಫೀಜುಗೀಜು ಕಟ್ಟಂಗಿಲ್ವಂತೆ, ಅದೇನೋ ರಿಸರ್ವೇಶನ್ ಐತಂತೆ. ಅಷ್ಟಕ್ಕೂ ಮೀರಿ ಬಂದ್ರೆ ನೀನೇಳ್ದಂಗೆ ಒಂದೆಕ್ರೆ ಮಾರೋಕೆ ನಾನೇನೂ ಹಿಂದ್ ಮುಂದ್ ನೋಡಲ್ಲ ಬಿಡು.'' ಎಂದು ಅಪ್ಪನಿಗೆ ಸಪೋರ್ಟು ಮಾಡುವ ಮಾತುಗಳನ್ನಾಡಿದ್ದ. ಪಿಯುಸಿ ಸೇರಲು ಕಾಲೇಜಿಗೆ ಹೋದಾಗ ಅಡ್ಮಿಷನ್ ಮಾಡಿಕೊಳ್ಳುವ ಕ್ಲರ್ಕ್ ಕೂಲಂಕಷವಾಗಿ ಅಪ್ಲಿಕೇಶನ್, ಮಾರ್ಕ್ಸ್ ಕಾರ್ಡ್ ಪರಿಶೀಲಿಸಿ, ''ನಿನ್ನ ಡೇಟ್ ಆಫ್ ಬರ್ತ್ ಎಷ್ಟೋ ಹುಡುಗ?'' ಎಂದು ಕೇಳಿದ್ದ. ಪೆಂಚಾಲ ನಗುತ್ತಾ, ''ಅದ್ರಾಗೆ ಐತೆ ನೋಡಿ ಸಾ.'' ಎಂದಿದ್ದ. ಕೂಡಲೇ ಕ್ಲರ್ಕ್ ಅಪ್ಲಿಕೇಶನ್ ಜೊತೆಗೆ ಪೆಂಚಾಲಯ್ಯನನ್ನು ಪ್ರಿನ್ಸಿಪಾಲರ ಮುಂದೆ ನಿಲ್ಲಿಸಿದ್ದ. ''ಏನ್ರಿ ಚನ್ನಪ್ಪ ಪ್ರಾಬ್ಲಂ?'' ಎಂದ ಪ್ರಿನ್ಸಿಪಾಲರ ಮಾತಿಗೆ, ''ಸಾರ್ ಈ ಹುಡುಗನ ಡೇಟ್ ಆಫ್ ಬರ್ತ್ ಫೆಬ್ರುವರಿ ಮೂವತ್ತನೇ ತಾರೀಖು ಅಂತ ಟಿ.ಸಿ, ಮಾರ್ಕ್ಸ್ ಕಾರ್ಡ್ ಎರಡ್ರಲ್ಲೂ ನಮೂದಾಗೈತೆ.'' ಎಂದಿದ್ದ ಕ್ಲರ್ಕ್. ''ಮತ್ತಿನ್ನೇನು ಸೇರಿಸಿಕೊಳ್ಳಿ.'' ಎಂದಿದ್ದರು ಪ್ರಿನ್ಸಿಪಾಲರು. ಕ್ಲರ್ಕ್ ತಲೆ ಕೆರೆದುಕೊಳ್ಳುತ್ತಾ, ''ಸಾರ್, ಫೆಬ್ರುವರಿ ತಿಂಗಳಲ್ಲಿ ಮೂವತ್ತನೇ ತಾರೀಖು ಎಲ್ಲಿ ಬರ್ತೈತೆ ಸಾರ್?'' ಎಂದಿದ್ದ. ಪ್ರಿನ್ಸಿಪಾಲರು ಬೆಚ್ಚಿ ಬಿದ್ದವರಂತೆ, ''ಹೌದಲ್ರಿ ಚನ್ನಪ್ಪ, ನಾನೂ ಮರೆತಿದ್ದೆ. ಆದ್ರೂ ಎಸ್ಸೆಸ್ಸೆಲ್ಸಿ ಮಾರ್ಕ್ಸ್ ಕಾರ್ಡ್‌ನಲ್ಲಿ ಹಂಗೆ ನಮೂದಾಗಿದ್ರೆ ನಾವೇನು ಮಾಡಕಾಗ್ತದೆ. ಎಸ್ಸೆಸ್ಸೆಲ್ಸಿ ಮಾರ್ಕ್ಸ್ ಕಾರ್ಡ್ ಅನ್ನೋದು ಥೇಟ್ ಯಮಧರ್ಮರಾಯನ ಅಸಿಸ್ಟೆಂಟ್ ಚಿತ್ರಗುಪ್ತನ ಡೈರಿ ಇದ್ದಂಗೆ. ಅದ್ರಾಗಿನ ಒಂದೇ ಒಂದು ಗೀಟನ್ನೂ ಯಾರೂ ತಿದ್ದಂಗಿಲ್ಲ, ತೀಡಂಗಿಲ್ಲ. ಅದ್ರುಸಾಬರಿ ನಮ್ಮ್ಯಾಕಿದ್ದಾತು, ಸೇರಿಸ್ಕಂಡು ಕ್ಲಾಸಿಗೆ ಗದುಮ್ರಿ. ಹುಡುಗ ಬೇರೆ ಬ್ರಿಲಿಯೆಂಟ್ ಇದ್ದಂಗವ್ನೆ. ಜೊತೆಗೆ ಎಸ್ಟಿ ಸಮುದಾಯಕ್ಕೆ ಬೇರೆ ಸೇರವ್ನೆ. ಮುಂದಕ್ಕೆ ಭಗವಂತ ಅವ್ನೆ.'' ಎಂದು ಅಪ್ಲಿಕೇಶನ್ನನ್ನು ಕ್ಲರ್ಕ್ ಕಡೆ ನೂಕಿದ್ದರು ಪ್ರಿನ್ಸಿಪಾಲರು. ಪೆಂಚಾಲಯ್ಯನಿಗೆ ಆವೊತ್ತೇ ಗೊತ್ತಾಗಿದ್ದು ಫೆಬ್ರುವರಿ ತಿಂಗಳಲ್ಲಿ ಮೂವತ್ತನೇ ತಾರೀಖು ಯಾವ ವರ್ಷವೂ ಬರುವುದಿಲ್ಲವೆಂಬ ಘನಘೋರ ಸತ್ಯ!

ಪೆಂಚಾಲಯ್ಯ ಇದೇ ರೀತಿಯಲ್ಲಿ ಡಿಗ್ರಿಯನ್ನು, ಕನ್ನಡ ಎಂ.ಎ.ಯನ್ನು ಕೂಡಾ ಪಾಸುಮಾಡಿದ್ದ. ಡಿಗ್ರಿ ಕಾಲೇಜಿನ ಗುಮಾಸ್ತರಿಗಾಗಲೀ, ಯೂನಿವರ್ಸಿಟಿಯ ಅಡ್ಮಿನಿಸ್ಟ್ರೇಷನ್ ವಿಭಾಗದಲ್ಲಿ ಕೆಲಸ ಮಾಡುವ ಸ್ಟಾಫ್‌ಗಾಗಲೀ ಪೆಂಚಾಲಯ್ಯನ ಫೆಬ್ರುವರಿ ಡೇಟ್ ಆಫ್ ಬರ್ತ್ ಲೀಲೆ ಕಣ್ಣಿಗೆ ಬಿದ್ದಿರಲೇ ಇಲ್ಲ. ಪೆಂಚಾಲಯ್ಯ ಮ್ಯಾಥ್ಸ್, ಇಂಗ್ಲಿಷ್ ಮತ್ತು ಸೈನ್ಸ್ ಸಬ್ಜೆಕ್ಟಗಳಲ್ಲಿ ವೀಕಿದ್ದುದ್ದರಿಂದಲೂ, ಕನ್ನಡ ಲಾಂಗ್ವೇಜ್, ಇತಿಹಾಸ ಮತ್ತು ಸೋಷಿಯಲ್ ಸೈನ್ಸ್ ಸಬ್ಜೆಕ್ಟುಗಳಲ್ಲಿ ಸ್ಟ್ರಾಂಗ್ ಇದ್ದುದ್ದರಿಂದಲೂ ಸಾಹಿತ್ಯ ಪೆಂಚಾಲಯ್ಯನನ್ನು ತುಂಬಾ ಅಟ್ರಾಕ್ಟ್ ಮಾಡಿತ್ತಲ್ಲದೆ ಅವನೆದೆಯಲ್ಲಿ ಮಾನವೀಯತೆಯ ಬೀಜವನ್ನು ಬಿತ್ತಿತ್ತು. ಎಂ.ಎ. ಸೆಕೆಂಡ್ ಕ್ಲಾಸಿನಲ್ಲಿ ಪಾಸಾದ ಪೆಂಚಾಲಯ್ಯ ಲೆಕ್ಚರರ್ ಕೆಲಸ ಹುಡುಕಿಕೊಂಡು ಸುಮಾರು ಪ್ರೈವೇಟ್ ಕಾಲೇಜುಗಳನ್ನು ಅಲೆದಿದ್ದ. ಅಷ್ಟರಲ್ಲಿ ಸ್ಟೈಫಂಡ್ ಕಾಲ್ ಮಾಡಿದ್ದರಿಂದ ಒಂದು ಅಪ್ಲಿಕೇಶನ್ ಬಿಸಾಕಿದ್ದ. ಅಲ್ಲಿಯೂ ಕೂಡ ಪೆಂಚಾಲಯ್ಯನ ಡೇಟ್ ಆಫ್ ಬರ್ತ್ ಪ್ರಸ್ತಾಪಕ್ಕೆ ಬಂದಿರಲೇ ಇಲ್ಲ. ಅದೃಷ್ಟ ಸ್ವಲ್ಪ ಪೆಂಚಾಲಯ್ಯನ ಕಡೆ ವಾಲಿಕೊಂಡು ಸೆಲೆಕ್ಟ್ ಆಗಿಬಿಟ್ಟ. ಅದು ಹಾಗೆ ಪರ್ಮನೆಂಟ್ ಕೂಡಾ ಆಗಿಹೋಗಿತ್ತು. ಹಾಗಾಗಿ ಯಾವೊತ್ತೂ ಅವನ ಡೇಟ್ ಆಫ್ ಬರ್ತ್ ಅವನನ್ನು ಬಾಧಿಸಿರಲಿಲ್ಲ. ಮಗ ಹುಟ್ಟಿ, ಅವನಿಗೆ ಬುದ್ಧಿ ಬಂದು ಸ್ಕೂಲಿಗೆ ಹೋಗಲು ಪ್ರಾರಂಭವಾಗಿ, ಮನೆಯಲ್ಲಿ ಕೇಕ್ ಕಟ್ ಮಾಡಿ ಅವನ ಬರ್ತ್ ಡೇ ಸೆಲೆಬ್ರೇಟ್